**CC No. 218/2020**

DW- 1

**ದಿನಾಂಕಃ 27-03-2024 ರಂದು ಸಾಕ್ಷಿಗೆ ಪ್ರಮಾಣ ವಚನ ಬೋಧಿಸಲಾಯಿತು.**

**<u>ಪಾಟೀ ಸವಾಲುಃ ದೂರುದಾರ ಪರ Sri.BKJ ವಕೀಲರಿಂದಃ</u>**

ನಾನು ದ್ವಿತೀಯ PUC ವರೆಗೂ ವಿದ್ಯಾಭ್ಯಾಸ ಮಾಡಿರುತ್ತೇನೆ. ನಾನು ಬೆಂಗಳೂರಿನ ವಿದ್ಯಾಮಾನ್ಯ ನಗರದಲ್ಲಿ ವಾಸವಿರುತ್ತೇನೆಂದರೆ ಸರಿ. ನಾನು 2014 ರಲ್ಲಿ ಪಂಥ್ಯ ಸಿನಿಮಾ ನಿರ್ಮಾಣ ಮಾಡಿದ್ದು, ಅದೇ ಇಸ್ವಿಯಲ್ಲಿ ಸದರಿ ಸಿನಿಮಾದ ನಿರ್ಮಾಣ complete ಆಗಿರುತ್ತದೆ. ಸಾಮಾನ್ಯವಾಗಿ ಒಂದು ಸಿನಿಮಾ ನಿರ್ಮಾಣ ಮಾಡಲು ಎಷ್ಟು ಹಣ ಬೇಕಾಗುತ್ತದೆ ಎಂಬ ಪ್ರಶ್ನೆಗೆ ಸಾಕ್ಷಿಯು ಹೊಸ ನಟನನ್ನು ಹಾಕಿಕೊಂಡು ಸಿನಿಮಾ ಮಾಡಿದರೆ ಅಂದಾಜು ಒಂದು ಕೋಟಿವರೆಗೂ ಖರ್ಚು ಬರಬಹುದು ಎಂದು ನುಡಿಯುತ್ತಾರೆ. 2014 ರಲ್ಲಿ ಸಿನಿಮಾ ನಿರ್ಮಾಣ ಮಾಡಲು ನನ್ನ ಹತ್ತಿರ ಒಂದು ಕೋಟಿ ರೂ. ಇತ್ತು ಎಂದು ತೋರಿಸಲು ಮಾನ್ಯ ನ್ಯಾ ಕ್ಕೆ ಯಾವುದೇ ದಾಖಲಾತಿಗಳನ್ನು ಹಾಜರುಪಡಿಸಿರುವುದಿಲ್ಲ. ಪಂಥ್ಯ ಸಿನಿಮಾ ನಿರ್ಮಾಣದ ಪೂರ್ವದಲ್ಲಿ ನಾನು ತ್ರಿವೇಣಿ industries factory ಯಲ್ಲಿ ಕೆಲಸ ಮಾಡುತ್ತಿದ್ದೆನು ಎಂದರೆ ಸರಿ. ನನ್ನ ಜೊತೆ ಅದೇ ಸಮಯದಲ್ಲಿ ತ್ರಿವೇಣಿ industries factory ಯಲ್ಲಿ ಗುರುಪಾದಪ್ಪ ಭೀಮಪ್ಪ ಬಿರಾದಾರ ಕೆಲಸ ಮಾಡುತ್ತಿದ್ದೆನು ಎಂದರೆ ಸರಿ.

ಕಾಲಬೈರವ ಆರ್ಟ್ಸ್ ಬ್ಯಾನರ ನನ್ನ ಒಡೆತನದ ಬ್ಯಾನರ ಆಗಿರುತ್ತದೆ ಎಂದರೆ ಸರಿ. ಬೆಂಗಳೂರಿನಲ್ಲಿ ಕಾಲಬೈರವ ಆರ್ಟ್ಸ್ ಎಂಬ ಹೆಸರಿನ ಬ್ಯಾನರ ಕೇವಲ ನನ್ನದು ಮಾತ್ರ ಇದ್ದು ಬೇರೆಯವರು ಇರುವುದಿಲ್ಲ ಎಂದರೆ ಇರಬಹುದು ನನಗೆ ಮಾಹಿತಿ ಇಲ್ಲ. ಪ್ರಕರಣದ ದೂರುದಾರ ನನಗೆ ಗುರುಪಾದಪ್ಪ ಬಿರಾದಾರ ಮುಖಾಂತರ ಪರಿಚಯ ಆಗಿರುತ್ತಾನೆ. ನನ್ನ ಸಾಕ್ಷಿ ಮುಖ್ಯ ವಿಚಾರಣೆಯ ಸಮಯದಲ್ಲಿ ಮಾನ್ಯ ನ್ಯಾ ಕ್ಕೆ ಯಾವುದೇ ದಾಖಲಾತಿಗಳನ್ನು ಹಾಜರುಪಡಿಸಿರುವುದಿಲ್ಲ ಎಂದರೆ ಸರಿ. ನನ್ನ ಮತ್ತು ದೂರುದಾರರ ನಡುವೆ ಸಿನಿಮಾದಿಂದ ಬಂದ ಹಣದಲ್ಲಿ 30% ಹಣವನ್ನು ದೂರುದಾರನಿಗೆ ಕೊಡಬೇಕು ಎಂದು ಒಪ್ಪಂದ ಆಗಿರುವ ಬಗ್ಗೆ ನನ್ನ ಸಾಕ್ಷಿ ಮುಖ್ಯ ವಿಚಾರಣೆಯಲ್ಲಿ ಹೇಳಿದ್ದು ಈ ಬಗ್ಗೆ ಮಾನ್ಯ ನ್ಯಾ ಕ್ಕೆ ಯಾವುದೇ ದಾಖಲಾತಿಗಳನ್ನು ಹಾಜರುಪಡಿಸಿರುವುದಿಲ್ಲ ಎಂದರೆ ಸರಿ, ಸಾಕ್ಷಿಯು ಮುಂದುವರೆದು ಸದರಿ ಒಪ್ಪಂದ ಪತ್ರ ದೂರುದಾರನ ಹತ್ತಿರ ಇರುತ್ತದೆ ಎಂದು ನುಡಿಯುತ್ತಾರೆ. ಸದರಿ ಒಪ್ಪಂದ ಪತ್ರದ ನಕಲು ಪ್ರತಿ ನನ್ನ ಹತ್ತಿರ ಇದ್ದು ತುಂಬಾ ವರ್ಷ ಆಗಿದ್ದರಿಂದ ಅದನ್ನು ಈಗ ಕಳೆದುಕೊಂಡಿರುತ್ತೇನೆ. ಈ ವಿಚಾರವನ್ನು ನಾನು ನನ್ನ ವಕೀಲರಿಗೆ ಹೇಳಿರುತ್ತೇನೆ.

ನಾನು ಬೆಂಗಳೂರಿನ ಪಿಣ್ಯ ಶಾಖೆಯಲ್ಲಿ ಕಾರ್ಪೊರೇಷನ ಬ್ಯಾಂಕನಲ್ಲಿ ಕರೆಂಟ ಅಕೌಂಟನ್ನು ಹೊಂದಿರುತ್ತೇನೆಂದರೆ ಸರಿ.ಕಾರ್ಪೊರೇಷನ ಬ್ಯಾಂಕ ಈಗ union bank ಎಂದು ಬದಲಾಗಿರುತ್ತದೆ. ನನ್ನ

ಅಕೌಂಟ ನಂಬರನ ಕೊನೆಯ ಡಿಜಿಟಗಳು 1177 ಆಗಿರುತ್ತವೆ ಎಂದರೆ ಸರಿ. ಕಾರ್ಪೋರೇಷನ ಬ್ಯಾಂಕನ ಚೆಕ್ ನಂ. 843152 ಮತ್ತು 843153 ನನ್ನ ಅಕೌಂಟಗೆ ಸಂಬಂಧಿಸಿದ ಚೆಕ್ ಗಳಾಗಿರುತ್ತವೆ ಎಂದರೆ ಸರಿ. ನಿಪಿ-1 ರ ಮೇಲಿರುವ 1(ಎ) ಸಹಿ ನನ್ನದೇ ಆಗಿರುತ್ತದೆ ಎಂದರೆ ಸರಿ, ಸಾಕ್ಷಿಯು ಮುಂದುವರೆದು ಸಹಿಯನ್ನು ಹೊರತುಪಡಿಸಿ ಉಳಿದ ವಿವರಗಳನ್ನು ನಾನು ಬರೆದಿರುವುದಿಲ್ಲ ಎಂದು ನುಡಿಯುತ್ತಾರೆ. ನಿಪಿ-1 ರಲ್ಲಿರುವ ಸಹಿ ಮತ್ತು ಉಳಿದ ವಿವರಗಳನ್ನು ನಾನೇ ಬರೆದಿರುತ್ತೇನೆಂದರೆ ಸರಿಯಲ್ಲ. ನಾನು ಬಾದ್ಯತೆಯಿಂದ ತಪ್ಪಿಸಿಕೊಳ್ಳಲು ಸುಳ್ಳು ಸಾಕ್ಷ್ಯನುಡಿಯುತ್ತಿದ್ದೇನೆಂದರೆ ಸರಿಯಲ್ಲ.

ದೂರುದಾರನಿಗೆ ನಾನು ನವೆಂಬರ 2018 ರಲ್ಲಿ ಖಾಲಿ ಚೆಕ್ಕುಗಳನ್ನು ಕೊಟ್ಟಿರುತ್ತೇನೆ. ದೂರುದಾರನಿಗೆ ನಾನು ಖಾಲಿ ಚೆಕ್ ಕೊಟ್ಟಿರುವುದಕ್ಕೆ ದೂರುದಾರನಿಂದ ಯಾವುದೇ ಹಿಂಬರಹ ಪಡೆದುಕೊಂಡಿರುವುದಿಲ್ಲ. ನಾನು ನನ್ನ ಮುಖ್ಯ ವಿಚಾರಣೆಯಲ್ಲಿ ದೂರುದಾರನಿಗೆ ರೂ. 70,000/- ಒಂದು ಸಲ ಮತ್ತೊಂದು ಸಲ ರೂ.80,000/- ಗಳನ್ನು ಕೊಟ್ಟಿದ್ದೇನೆಂದು ಹೇಳಿದ್ದು ಸದರಿ ಹಣವನ್ನು ನಾನು ದೂರುದಾರನಿಗೆ ಮಾರ್ಚ 2019 ರಲ್ಲಿ ನನ್ನ ಕಚೇರಿಯಲ್ಲಿ ಕೊಟ್ಟಿರುತ್ತೇನೆ. ಹಾಗೇ ಹಣ ದೂರುದಾರನಿಗೆ ಮುಟ್ಟಿರುವುದಕ್ಕಾಗಿ ದೂರುದಾರನಿಂದ ಯಾವುದೇ ಸ್ವೀಕೃತಿ ಪಡೆದುಕೊಂಡಿರುವುದಿಲ್ಲ. ಮೇಲೆ ಹೇಳಿದ ರೂ.70,000/- ಮತ್ತು ರೂ.80,000/- ಅಂದರೆ ಒಟ್ಟು ರೂ.1,50,000/- ಗಳನ್ನು ನಾನು ರೀಯಲ್ ಎಸ್ಟೇಟ್ ಬಿಸಿನೆಸ್ ನಿಂದ ಗಳಿಸಿರುತ್ತೇನೆ, ಸಾಕ್ಷಿಯು ಮುಂದುವರೆದು ಅದೇ ಸಮಯದಲ್ಲಿ ಅಂದರೆ ಫೆಬ್ರುವರಿ ದೂರುದಾರನಿಗೆ NEFT ಮುಖಾಂತರ ರೂ.1,00,000/- ಗಳನ್ನು ಕೊಟ್ಟಿರುತ್ತೇನೆ. ದೂರುದಾರನಿಗೆ ರೂ.70,000/- ಮತ್ತು ರೂ.80,000/- ಹಣ ಕೊಟ್ಟಿರುವುದಕ್ಕೆ ನಾನು ನನ್ನ ವೈಯಕ್ತಿಕ ಡೈರಿಯಲ್ಲಿ ಈ ಬಗ್ಗೆ ನಮೂದು ಮಾಡಿರುತ್ತೇನೆ. ಸದರಿ ಡೈರಿ ನನ್ನ ಹತ್ತಿರ ಇದ್ದು ಅದನ್ನು ಮಾನ್ಯ ನ್ಯಾಕ್ಕೆ ಹಾಜರುಪಡಿಸಿರುವುದಿಲ್ಲ, ಹಾಗೇ ಹಾಜರುಪಡಿಸಲು ಯಾವುದೇ ತೊಂದರೆ ಇರಲಿಲ್ಲ ಎಂದರೆ ಸರಿ.

**ಮುಂದುವರೆದ ಪಾಟೀ ಸವಾಲಿಗೆ ದೂರುದಾರ ಪರ ವಕೀಲರು ಸಮಯ ಕೋರಿದ್ದು ನ್ಯಾಯಯುತವಾದ ದೃಷ್ಟಿಯಿಂದ ಸಮಯ ನೀಡಲಾಯಿತು.**

ಗಣಕೀಕರಿಸಿ ಓದಿ ಹೇಳಿ ಕೇಳಿದಾಗ ಸರಿ ಇದೆ ಎಂದು ಒಪ್ಪಿರುತ್ತಾರೆ.

ಪ್ರ. ದ. ನ್ಯಾ. ದಂ.,
**ಮೂಡಲಗಿ.**